# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA









ಸಂಪುಟ:01 • ಸಂಚಿಕೆ:217 • ನೋಂದಣಿ ನಂ.:KARKAN27911 • ವಿಜಯನಗರ • 23.01.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:217 • Reg.No:KARKAN27911 • VIJAYANAGARA • 23.01.2024 • Tuesday • Page:04 • Rs:2


# ಕೌಸಲ್ಯನಂದನಿಗೆ ಪಟ್ಟಾಭಿಷೇಕ
# ಜಾನಕಿವಲ್ಲಭನಿಗೆ ಜಗದ ನಮನ

## ಎಲ್ಲೆಡೆ ಝೇಂಕರಿಸಿದ ರಾಮನಾಮ ಭಕ್ತಿಸೇವೆಯಲ್ಲಿ ಮಿಂದೆದ್ದ ಭಕ್ತರು

**ಹಂಪಿ ಟೈಮ್ಸ್ ಹೊಸಪೇಟೆ**

ಅಯೋಧ್ಯೆಯಲ್ಲಿ ಕೌಸಲ್ಯನ ಪುತ್ರ ಶ್ರೀರಾಮನಿಗೆ ಪಟ್ಟಾಭಿಷೇಕ ನಡೆಯುತ್ತಿದ್ದರೆ, ರಾಮನ ಭಕ್ತನ ಜನ್ಮಸ್ಥಳ ಅಂಜನಾದ್ರಿ–ಹಂಪಿಯ ಅಂಗಳದಲ್ಲಿ ಶ್ರೀರಾಮನ ಭಕ್ತ ಹನುಮಂತನ ದೇಗುಲಗಳಲ್ಲಿ, ಓಣಿಗಳಲ್ಲಿ, ವಿವಿಧ ದೇವಸ್ಥಾನಗಳಲ್ಲಿ ಭಜನೆ, ಶ್ರೀರಾಮ ಜಯರಾಮ ನಾಮ ಸ್ಮರಣೆ ಝೇಂಕರಿಸಿತು. ಹಂಪಿಯಲ್ಲಿ ಅರ್ಚಕರು ಹೋಮ ಹವನ ನಡೆಸಿದರು. ಚಕ್ರತೀರ್ಥ ಬಳಿಯ ಕೋದಂಡರಾಮದೇವಸ್ಥಾನ ವಿಶೇಷ ಪೂಜೆ ಸಲ್ಲಿಸಲಾಯಿತು. ಯಂತ್ರೋದ್ಧಾರಕ ಆಂಜನೇಯಸ್ವಾಮಿ, ಸೀತೆಯ ಹುಡುಕಾಟಕ್ಕೆ ಬಂದು ತಂಗಿದ್ದ ಮಾಲ್ಯವಂತ ದೇವಸ್ಥಾನದಲ್ಲಿ ಶ್ರೀರಾಮನಿಗೆ ವಿಶೇಷ ಅಭಿಷೇಕ ಪೂಜೆ ನೆರವೇರಿಸಲಾಯಿತು. ಹೊಸಪೇಟೆ ನಗರದ ಅನಂತಶಯನಗುಡಿಯ ಸಪ್ತಾಂಜನೇಯಸ್ವಾಮಿ, ನಗರದ ಶ್ರೀವಡಕರಾಯಸ್ವಾಮಿ, ಪಾದಘಟ್ಟೆ ಆಂಜನೇಯಸ್ವಾಮಿ, ಹೊಸಅಮರಾವತಿ ಆಂಜಿನೇಯಸ್ವಾಮಿ ಸೇರಿದಂತೆ ವಿಜಯನಗರ ಜಿಲ್ಲೆಯಾದ್ಯಂತ ಇರುವ ಹನುಮ ದೇಗುಲಗಳಲ್ಲಿ ಭಕ್ತರು ಪೂಜೆ ಸಲ್ಲಿಸಿ ರಾಮನಾಮ ಸ್ಮರಣೆ ಮಾಡಿದರು. ನಗರದ ವಾಲ್ಮೀಕಿ ವೃತ್ತದಲ್ಲಿರುವ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಮೇದಾರ ಸಮಾಜದಿಂದ ಶ್ರೀರಾಮನ ಆರಾಧನೆಯನ್ನು ವಿಶೇಷವಾಗಿ ಆಚರಿಸಿದರು. ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಅಖಂಡ ಹನುಮಾನ್ ಚಾಲೀಸಾ ಪಠಣ ಮಾಡಿ, ಬಾಲರಾಮನನ್ನು ಸ್ಮರಿಸಿದರು. ಹಂಪಿ ಸೇರಿದಂತೆ ವಿವಿಧೆಡೆ ಪ್ರಸಾದ ವಿತರಿಸಿದರು.



ಹೊಸಪೇಟೆಯ ಹೊಸಅಮರಾವತಿ ಆಂಜಿನೇಯಸ್ವಾಮಿಗೆ ವಿಶೇಷ ಪೂಜೆ.




ಹೊಸಪೇಟೆ ಅನಂತಶಯನಗುಡಿಯ ಸಪ್ತಾಂಜಿನೇಯಸ್ವಾಮಿಗೆ ಬೆಣ್ಣೆ ಅಲಂಕಾರ.





ಅಯೋಧ್ಯೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಜ.22 ರಂದು ಸೋಮವಾರ ನೆರವೇರಿದ ಬಾಲರಾಮನ ಪ್ರಾಣಪ್ರತಿಷ್ಠಾಪನೆ




ಹಂಪಿ ಅಧಿಪತಿ ಶ್ರೀಪಂಪಾ ವಿರೂಪಾಕ್ಷೇಶ್ವರ ಸ್ವಾಮಿಗೆ ಅಯೋಧ್ಯೆಯಲ್ಲ ಬಾಲರಾಮ ಪ್ರಾಣಪ್ರತಿಷ್ಠಾಪನೆ ನಿಮಿತ್ತ ವಿಶೇಷ ಅಭಿಷೇಕ, ಪೂಜೆ ನೆರವೇರಿಸಲಾಯಿತು. ಹೋಮ, ಹವನ ಮೂಲಕ ಸ್ಮರಣೆ ನಡೆಯಿತು.





ಹೊಸಪೇಟೆ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಬಾಲರಾಮನ ಪ್ರತಿಷ್ಠಾಪನೆ ನಿಮಿತ್ತ ಮೇದಾರ ಸಮಾಜದ ಮುಖಂಡರು ಶ್ರೀರಾಮ ಭಜನೆ ಪೂಜೆ ಸಲ್ಲಿಸಿದರು.



ಹಂಪಿ ಮಾಲ್ಯವಂತ ದೇವಸ್ಥಾನದಲ್ಲಿ ಶ್ರೀರಾಮ ಲಕ್ಷ್ಮಣ ಸೀತೆ, ಹನುಮಗೆ ವಿಶೇಷ ಪೂಜೆ, ರಾಮನ ಭಜನೆ, ಪಾರಾಯಣ ಜರುಗಿತು.






ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆ ನಿಮಿತ್ತ 500 ವರ್ಷಗಳ ಕನಸು ನನಾಸಿಗಿರುವ ರಾಮಮಂದಿರಕ್ಕೆ ವಿಶೇಷ ಪುಷ್ಪಲಂಕಾರ ನೆರವೇರಿಸಲಾಗಿತ್ತು. ವೈಭವದ ರಾಮಮಂದಿರವನ್ನು ಮಠಾದೀಶರು, ಸಂತರು, ಗಣ್ಯವ್ಯಕ್ತಿಗಳು ನೇರವಾಗಿಕಣ್ತುಂಬಿಕೊಂಡರು.




ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆ ನಿಮಿತ್ತ ಹೊಸಪೇಟೆ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಮೇದಾರ ಯುವಕ ಸಂಘ ಹಾಗೂ ಮಹಿಳಾ ಸಂಘದ ಸದಸ್ಯರು ಹಾಗೂ ಸಮಾಜದ ಮುಖಂಡರು ವಿಶೇಷ ಪೂಜೆ ಸಲ್ಲಿಸಿ, ದೇಗುಲ ಮುಂದೆ ರಂಗೋಲಿಯಲ್ಲಿ ರಾಮಮಂದಿರ ಅರಳಿಸಿ ದೀಪಾರಾಧನೆ ಮಾಡಿ ಭಕ್ತಿ ಮೆರೆದರು.

## ವಚನ ಅರಿವು

### ಪಾಪವ ಮಾಡಬೇಡ

**ಪುಣ್ಯವ ಮಾಡಬೇಕೆಂದು ಮರುಗಬೇಡ,**
**ಪಾಪವ ಮಾಡದಿದ್ದರೆ ಪುಣ್ಯ ದಿಟ.**
**ಬೇರೆ ತೀರ್ಥ ಬೇಡ**
**ಸತ್ಯವ ನುಡಿವಲ್ಲಿ ಸಂದಿಲ್ಲದಿಹನು.**
**ಕಪಿಲಸಿದ್ಧಮಲ್ಲಿಕಾರ್ಜುನ**
**ಹುಸಿಗೆ ಹರುಡಿಗನು.**

**– ಸಿದ್ಧರಾಮೇಶ್ವರ**

ಪುಣ್ಯ ಬರಲಿ ಎಂದು ಹಂಬಲಿಸಿ ಏನೆಲ್ಲಾ ಹೊರಗಿನಿಂದ ಕಸರತ್ತುಗಳನ್ನು ಮಾಡುತ್ತೇವೆ. ಅದೊಂದು ತೋರ್ಗಾಣಿಕೆಯ ನಾಟಕವಾಗಿರುತ್ತದೆ. ಆದರೆ ಪುಣ್ಯ ಬರಬೇಕೆಂದರೆ ಯಾವುದೇ ಪಾಪದ ಕೆಲಸವನ್ನು ಮಾಡದಿದ್ದರೆ ಸಾಕು ತಾನಾಗಿಯೇ ಪುಣ್ಯ ಬರುತ್ತದೆ. ಪಾಪ ಕಳೆಯಲಿ ಎಂದು ತೀರ್ಥಕ್ಷೇತ್ರಗಳಿಗೆ ಹೋಗಿ ಹರಕೆ ತೀರಿಸಿಕೊಂಡು, ದಾನಮಾಡಿ ಬಂದರೆ ಪುಣ್ಯ ಬರುವುದಿಲ್ಲ. ಸತ್ಯದ ದಾರಿಯಲ್ಲಿ ಜೀವನ ಮಾಡುವುದು, ನೈತಿಕ ಮಾರ್ಗದಲ್ಲಿ, ಪ್ರಾಮಾಣಿಕವಾಗಿ ಬದುಕಿದರೆ ಅದೇ ಪವಿತ್ರ ಜೀವನವಾಗಿರುತ್ತದೆ. ಸುಳ್ಳಿನ ಬೆನ್ನು ಹತ್ತಿ ಓಡುವುದು ಬೇಡ ಎನ್ನುತ್ತದೆ ಸಿದ್ಧರಾಮೇಶ್ವರರ ಈ ವಚನ.


**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಟ್ವೀಟ್ X ಟ್ವೀಟ್



ನನಗೆ ತಿಳಿದಿರುವ ರಾಮ, ನಾನು ಪೂಜಿಸುವ ರಾಮ ವಚನ ಪರಿಪಾಲನೆಯನ್ನೇ ತನ್ನ ಉಸಿರಾಗಿಸಿಕೊಂಡವನು. ರಾಮಭಕ್ತಿ ನಿರಂತರ. ವೈಯಕ್ತಿಕವಾಗಿ ನಾನು, ರಾಮನಿಂದ ವಚನ ಪರಿಪಾಲನೆಯನ್ನು, ಭೀಮನಿಂದ (ಡಾ.ಅಂಬೇಡ್ಕರ್) ಸಮತೆ ಅನುಷ್ಠಾನವನ್ನು, ಬಸವನಿಂದ ನುಡಿ, ನಡೆಯ ನಡುವೆ ಅಂತರವಿಲ್ಲದೆ ಬದುಕುವುದನ್ನು ನನ್ನಲ್ಲಿ ಅಳವಡಿಸಿಕೊಳ್ಳುತ್ತಲೇ ಮುಂದುವರಿದಿದ್ದೇನೆ.

**– ಸಿದ್ದರಾಮಯ್ಯ, ಮುಖ್ಯಮಂತ್ರಿ**



ಅಯೋಧ್ಯೆಯಲ್ಲಿ ಇಂದು ನಡೆದ ಶ್ರೀರಾಮ ಮಂದಿರ ಲೋಕಾರ್ಪಣೆ ಹಾಗೂ ಶ್ರೀ ಬಾಲರಾಮ ದೇವರ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಭಾಗಿಯಾದ ಪುಣ್ಯ ನನ್ನದಾಯಿತು. ಈ ದೈವ ಕಾರ್ಯದಲ್ಲಿ ಪೂಜ್ಯ ತಂದೆ–ತಾಯಿ ಅವರೊಂದಿಗೆ ಭಾಗವಹಿಸಿದ್ದು ನನಗೆ ಧನ್ಯತೆಯ ಅನುಭೂತಿ ನೀಡಿದೆ.

**– ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ**



ಕೋಟ್ಯಂತರ ಭಕ್ತರ ಶತ ಶತಮಾನಗಳ ತಪಸ್ಸು ಇಂದು ಸಾಕಾರಗೊಂಡಿದೆ. ಈ ಕ್ಷಣದ ಸಾರ್ಥಕ ಅನುಭೂತಿಯನ್ನು ಶಬ್ದಗಳಲ್ಲಿ ವರ್ಣಿಸಲಾಗದು. ಪ್ರಭು ಶ್ರೀರಾಮಲಲಾನ ಅನುಗ್ರಹ ಎಲ್ಲ ಭಕ್ತರ ಮೇಲೆ, ಭಾರತದೇಶದ ಮೇಲೆ ನಿರಂತರವಾಗಿರಲಿ ಎಂದು ಪ್ರಾರ್ಥಿಸುತ್ತೇನೆ. ಜೈ ಶ್ರೀರಾಮ್!

**– ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ**

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

**ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕಗಳು, ಭರತ್ ಅವಾರ್ಡ್, ಕರ್ನಾಟಕದಿಂದ ನೀಡಲ್ಪಡುವ ಕ್ರೀಡಾ ರತ್ನ, ಏಕಲವ್ಯ ಪ್ರಶಸ್ತಿ ಪಡೆದ ಕ್ರೀಡಾಪಟು ಜೀವನಕ್ಕಾಗಿ ಇಂದು ಏನು ಮಾಡುತ್ತಿದ್ದಾನೆ ಗೊತ್ತಾ? ಸರ್ಕಾರಗಳು ಕ್ರೀಡಾಪಟುವಿನ ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿ ನೀಡಿದರೆ ಸಾಕೇ? ಆರ್ಥಿಕವಾಗಿ ಸಬಲರಲ್ಲದ, ರೆಕಮೆಂಡ್ ಮಾಡುವವರು ಇಲ್ಲದ ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗ ಮರೀಚಿಕೆಯೇ ಎಂಬ ಪ್ರಶ್ನೆ ಕ್ರೀಡಾಪಟುಗಳನ್ನು ಕಾಡುತ್ತಿದ್ದು, ಪ್ರತಿಭೆ ಇರುವವರ ಬದುಕು ಚಿಂತಾಜನಕವಾಗಿದೆ....!**

# ಬದುಕಿಗೆ ಆಧಾರವಾಗದ ಚಿನ್ನದ ಪದಕಗಳು

### ಏಕಲವ್ಯ ಪ್ರಶಸ್ತಿ ಪುರಸ್ಕೃತ ಮುನೀರ್ ಬಾಷಾ ಇಂದು ಪಂಪ್ ಆಪರೇಟರ್ । ಪ್ರೋತ್ಸಾಹ ಎದುರು ನೋಡುತ್ತಿರುವ ಪ್ರತಿಭಾವಂತ ಕ್ರೀಡಾಪಟು

ಬಡವನಾಗಿ...ಹುಟ್ಟಿ, ಬೆಳೆದು, ಸಾಧಿಸಿ ಬಡವನಾಗೆ.....? ಮುಂದೆ ಏನು ಹೇಳಬೇಕೆಂದು ತಿಳಿಯುತ್ತಿಲ್ಲ.

ಮುನೀರ್ ಬಾಷಾ ಖೋ–ಖೋ ಕ್ರೀಡೆಯಲ್ಲಿ ಕರ್ನಾಟಕ ಸರ್ಕಾರದ ಅತ್ಯುನ್ನತ 'ಏಕಲವ್ಯ ಪ್ರಶಸ್ತಿ'ಪಡೆದ ಭದ್ರಾವತಿಯ ಆಟಗಾರ. ಭದ್ರಾವತಿಯ ಎ.ಪಿ.ಎಂ.ಸಿ.ಯಲ್ಲಿ ಹಮಾಲಿ ಕೆಲಸ ಇಂದಿಗೂ ಮಾಡುತ್ತಿರುವ ಅಹಮದ್ ಜಾನ್, ಆರಿಫಾಬೇಗಂ ರವರ ಮಗ ಇವರದ್ದು ಕಡು ಬಡತನದ ಕುಟುಂಬ. ಶ್ರೀಯುತರು ಜಿಎಫ್‌ಜಿಸಿ ಭದ್ರಾವತಿಯಲ್ಲಿ ಬಿ.ಎ ಪದವೀಧರರಾಗಿರುತ್ತಾರೆ.

ಪ್ರಾಥಮಿಕ ಶಿಕ್ಷಣದ ಸಂದರ್ಭದಲ್ಲಿ ಮಂಜುನಾಥ್, ಪ್ರೌಢ ಶಿಕ್ಷಣ ಪಡೆಯುವಾಗ ತಿಮ್ಮಪ್ಪ (ಭದ್ರಾವತಿಯ ಖೋ–ಖೋ ಭೀಷ್ಮ) ಇವರ ಮಾರ್ಗದರ್ಶನದಲ್ಲಿ ಆಟಕ್ಕೆ ಬೇಕಾದ ಕೌಶಲ್ಯಗಳನ್ನು ಕಲಿತರು.

ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗ ಭದ್ರಾವತಿ ಯುನೈಟೆಡ್ ಕ್ಲಬ್ನ ಹಿರಿಯ ಆಟಗಾರರು ಆಟ ಆಡುವಾಗ ನೋಡುತ್ತಾ ಕುಳಿತಿರುತ್ತಿದ್ದೆ ಇದನ್ನು ಗಮನಿಸಿದ ವಿವಿನ್ ರಾಜ್ ನನ್ನನ್ನು ಪ್ರೇರೇಪಿಸಿ ಆಟದಲ್ಲಿ ತೊಡಗುವಂತೆ ಮಾಡಿದರು ನಂತರ ಮಂಜುನಾಥ್ ಸರ್ ರವರು ಖೋ–ಖೋ ತಂಡವನ್ನು ಮಾಡಿ ತರಬೇತಿಯನ್ನು ನೀಡಿದರು.

ಅಪ್ಪ ಹಮಾಲಿ ಕೆಲಸ ಮಾಡಿಕೊಂಡು ಬರುವಾಗ ಎಪಿಎಂಸಿಯಲ್ಲಿ ಅಳಿದುಳಿದ ತರಕಾರಿ ಮತ್ತು ಹಣ್ಣುಗಳನ್ನು ತರುತ್ತಿದ್ದರು ಅದೇ ನನ್ನ ಪಾಲಿನ ಪೌಷ್ಟಿಕ ಸಮತೋಲನ ಆಹಾರವಾಗಿತ್ತು. ಅಷ್ಟಾಗಿ ಓದಿನಲ್ಲಿ ಆಸಕ್ತಿ ಇರದ ನಾನು ದ್ವಿತೀಯ ಪಿಯುಸಿಯಲ್ಲಿ ಫೇಲಾದೆ ಅಲ್ಲಿಗೆ ನನ್ನ ವ್ಯಾಸಂಗಕ್ಕೆ ಫುಲ್ ಸ್ಟಾಪ್ ಇಟ್ಟಾಗಾಯ್ತು. ಮುಂದೆ ತಂಗಿಯ ಮದುವೆಗೆ ಮಾಡಿದ ಸಾಲ ತೀರಿಸುವ ಹೊಣೆ, ಸಾಲ ತೀರಲು ನಾಲ್ಕು ವರ್ಷ ದುಡಿಯಬೇಕಾಯಿತು. ಸರ್.ಎಂ.ವಿಶ್ವೇಶ್ವರಯ್ಯ ಸ್ಪೋರ್ಟ್ಸ್ ಕ್ಲಬ್ ನ ವಿಶ್ವಾಸ್, ವಿನೋದ್, ಪ್ರದೀಪ್ ಮತ್ತು ಶ್ರೀನಿವಾಸ್ ಸರ್ ಇವರುಗಳು ತರಬೇತಿಗೆ ಕರದೊಯ್ದುರು. ವಿಶ್ವಾಸ್ ರವರ ಸಹಕಾರದೊಂದಿಗೆ ಪಿ.ಯು.ಸಿ ಯನ್ನು ಓಪನ್ ಯುನಿವರ್ಸಿಟಿ ಮೈಸೂರಿನಲ್ಲಿ ಪೂರ್ಣಗೊಳಿಸಿದೆ, ಮುಂದೆ ಡಿಗ್ರಿ ಕೂಡ ವಿಶ್ವಾಸ್‌ರವರೆ ಅಡ್ಮಿಶನ್ ಮಾಡಿಸಿದರು ಹಾಗೂ ವಿಶ್ವನಾಥ್ ದೈಹಿಕ ಶಿಕ್ಷಣ ನಿರ್ದೇಶಕರು ಪದವಿಗೆ ತಗಲುವ ಎಲ್ಲಾ ಖರ್ಚನ್ನು ನೋಡಿಕೊಂಡರು.

10ನೇ ತರಗತಿ ಓದುವಾಗ ಪಂಜಾಬಿನ ಪಾಟಿಯಾಲದಲ್ಲಿ ನಡೆದ ಸಬ್ ಜೂನಿಯರ್ ಕ್ರೀಡಾಕೂಟದಲ್ಲಿ ಕರ್ನಾಟಕ ತಂಡದಿಂದ ಆಟಗಾರನಾಗಿ ಆಯ್ಕೆಗೊಂಡು ಸೆಮಿಫೈನಲ್ ನಲ್ಲಿ ತಮಿಳುನಾಡಿನ ವಿರುದ್ಧ 07 ನಿಮಿಷ ಆಟವನ್ನು (ಡಾರ್ಜಿಂಗ್) ಆಡಿದೆ ವೆಸ್ಟ್ ಬಂಗಾಳ ವಿರುದ್ಧ ಅತ್ಯುತ್ತಮ ಆಟವನ್ನು ಪ್ರದರ್ಶನ ನೀಡಿ ತಂಡದ ಗೆಲುವಿಗೆ ಕಾರಣನಾದೆ ಇದರ ಪ್ರತಿಫಲವಾಗಿ ಅತ್ಯುತ್ತಮ ಆಟಗಾರ ಭರತ್ ಅವಾರ್ಡ್–2006 ಪಡೆದುಕೊಂಡೆ, ಭಾಗವಹಿಸಿದ ಮೊದಲ ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಈ ಪ್ರಶಸ್ತಿ ಪಡೆದಿದ್ದು ನನ್ನ ಜೀವನದ ಸಾಧನೆ.

2014 ಫೆಡರೇಶನ್ ರವರು ನಡೆಸುವ ಸೀನಿಯರ್ ಲೆವೆಲ್ ಕ್ರೀಡಾಕೂಟಕ್ಕೆ 10 ನೇ ಆಟಗಾರನಾಗಿ ಆಯ್ಕೆಯಾದೆ, ಸೀನಿಯರ್ ನ್ಯಾಷನಲ್ ಫೈನಲ್ ಪಂದ್ಯದಲ್ಲಿ ಕೊಲ್ಲಾಪುರ ತಂಡದ ಎದುರು ಅತ್ಯುತ್ತಮ ಆಟ ಪ್ರದರ್ಶಿಸುವುದರೊಂದಿಗೆ 'ಬೆಸ್ಟ್ ಆಲ್ ರೌಂಡರ್' ಪ್ರಶಸ್ತಿಯನ್ನು ಗಳಿಸಿದೆ ಅದು ನನಗೆ ಪ್ರಥಮ ಪಂದ್ಯ, ಆ ತಂಡದಲ್ಲಿ ರಾಷ್ಟ್ರ ತಂಡವನ್ನು ಪ್ರತಿನಿಧಿಸಿದ ಹಿರಿಯ ಆಟಗಾರರಿದ್ದರೂ ತಂಡದ ಗೆಲುವಿಗೆ ಕಾರಣನಾದ ತೃಪ್ತಿ ನನಗಿದೆ.



### ಕ್ರೀಡಾ ಸಾಧನೆಗಳು

ಅಸ್ಸಾಂನಲ್ಲಿ(2016) ನಡೆದ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ.
ನೇಪಾಳದಲ್ಲಿ(2019) ನಡೆದ ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ.
12 ಬಾರಿ ಕರ್ನಾಟಕ ತಂಡದ ಆಟಗಾರನಾಗಿ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿರುತ್ತಾರೆ.
05 ಬಾರಿ ಆಲ್ ಇಂಡಿಯಾ ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ.
02 ಬಾರಿ ಕುವೆಂಪು ವಿಶ್ವವಿದ್ಯಾನಿಲಯವನ್ನು ಅಂತರ ವಿಶ್ವವಿದ್ಯಾನಿಲಯದಲ್ಲಿ ಪ್ರತಿನಿಧಿಸಿರುತ್ತಾರೆ
ಮತ್ತು 02 ಬಾರಿ ಕರ್ನಾಟಕ ತಂಡದ ತರಬೇತುದಾರರಾಗಿ ರಾಷ್ಟ್ರಮಟ್ಟಕ್ಕೆ ತಂಡವನ್ನು ಕರೆದೊಯ್ದಿರುತ್ತಾರೆ.

### ಪ್ರಶಸ್ತಿ ಪುರಸ್ಕಾರಗಳು

**ಭರತ್ ಅವಾರ್ಡ್–2006** (14 ವರ್ಷ ವಯೋಮಾನದ ಒಳಗಿನವರಿಗೆ ನೀಡುವ ಪ್ರಶಸ್ತಿ), ಕರ್ನಾಟಕ ಸರ್ಕಾರದಿಂದ ನೀಡುವ **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ–2017**
2020–21 ನೇ ಸಾಲಿನ ಕರ್ನಾಟಕ ಸರ್ಕಾರದಿಂದ ನೀಡಲ್ಪಡುವ ಅತ್ಯುನ್ನತ **ಏಕಲವ್ಯ ಪ್ರಶಸ್ತಿ.**



**ಡಾ.ಸುಧಾಕರ ಜಿ.ಲಕ್ಕವಳ್ಳಿ**
**ಕ್ರೀಡಾ ಲೇಖಕರು, 8747969381**

ಸೀನಿಯರ್ ಕ್ಯಾಂಪ್ಗೆ ಆಯ್ಕೆಯಾದ ಸಂದರ್ಭದಲ್ಲಿ ನನಗೆ ಆಹಾರದ ಕೊರತೆ ಕಾಡುತ್ತಿತ್ತು ಅಲ್ಲಿನ ಅಡುಗೆ ತಯಾರಕರಲ್ಲಿ ನನಗೆ ಊಟ ಸಾಲುವುದಿಲ್ಲ ಹೆಚ್ಚು ಆಹಾರ ನೀಡಿ ಎಂದು ಮನವೊಲಿಸಿ ಉಳಿದ ಆಟಗಾರರು ಬಂದು ಊಟ ಮಾಡುವ ಮೊದಲು ಒಮ್ಮೆ ಊಟ ಮಾಡಿ ನಂತರ ಅವರೊಂದಿಗೆ ಮತ್ತೊಮ್ಮೆ ಊಟ ಮಾಡುತ್ತಿದ್ದೆ, ನಮ್ಮ ಸೀನಿಯರ್ ಆಟಗಾರರಾದ ವಿಶ್ವಾಸ್ ಮತ್ತು ವಿನೋದ್ ರವರು ತಮ್ಮಲ್ಲಿದ್ದ ಹಣ್ಣು, ಡ್ರೈ ಫ್ರೂಟ್ಸ್ ಗಳನ್ನು ನನಗೆ ನೀಡುತ್ತಿದ್ದಾಗಿ ತಿಳಿಸುತ್ತಾ ಅವರ ಋಣವನ್ನು ತೀರಿಸಲು ಈ ಜನ್ಮ ಸಾಲದು ಎಂದು ಹೇಳುತ್ತಾರೆ.

ಏಕಲವ್ಯ ಪ್ರಶಸ್ತಿ ಪಡೆಯುವ 06 ತಿಂಗಳ ಹಿಂದೆ ನನಗೆ ಬೈಕ್ ಅಪಘಾತವಾಗಿ ದೇವರ ದಯೆಯಿಂದ ಪ್ರಾಣಾಪಾಯದಿಂದ ಪಾರಾದೆ ಆದರೆ ಕಾಲಿಗೆ ಬಲವಾದ ಪೆಟ್ಟು ಬಿದ್ದ ಕಾರಣ ವೈದ್ಯರು ವಿಶ್ರಾಂತಿ ಪಡೆಯಲು ಸೂಚಿಸಿ ಗಾಯ ಮಾಯುವ ಮುನ್ನ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿ ತೊಂದರೆ ಉಲ್ಬಣವಾದರೆ ಮುಂದೆಂದೂ ಆಟವಾಡದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬ ಎಚ್ಚರಿಕೆ ನೀಡಿದ್ದು ನಾನು ತರಬೇತಿಯಿಂದ ವಿರಾಮ ಪಡೆಯಬೇಕಾಯಿತು, ಪರಿಣಾಮ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಸಾಧ್ಯವಾಗದೆ ನನ್ನ ಜೊತೆ ಆಡುತ್ತಿದ್ದ ಆಟಗಾರರಿಗೆ ಈ ಸಾಲಿನ(2023)ಅರ್ಜುನ ಪ್ರಶಸ್ತಿ ಲಭ್ಯವಾಗಿರುವುದು ಸಂತೋಷವಾದರೂ ನಾನು ಅಪಘಾತಕ್ಕೆ ಒಳಗಾಗದಿದ್ದರೆ ಈ ಪ್ರಶಸ್ತಿಯನ್ನು ಕರ್ನಾಟಕದ ಕ್ರೀಡಾಪಟುವಾಗಿ ಪಡೆಯಬಹುದಿತ್ತು ಎಂದು ಮೌನಕ್ಕೆ ಜಾರಿದರು ಮುನೀರ್.

ಇಷ್ಟೆಲ್ಲಾ ಕ್ರೀಡಾ ಸೇವೆ, ಸಾಧನೆ, ಪ್ರಶಸ್ತಿ ಪುರಸ್ಕಾರಗಳು, ಜನಮನ್ನಣೆ, ಪತ್ರಿಕಾ ಮಾಧ್ಯಮಗಳಲ್ಲಿ ಹೊಗಳಿಸಿಕೊಂಡ ನನಗಿಂದು ಜೀವನ ಮಾಡಲು ಒಂದು ಸರಿಯಾದ ಸರ್ಕಾರಿ ಉದ್ಯೋಗವಿಲ್ಲ. ಪದವಿಗಳಿಸಿದ ನಂತರ ಮುಂದೆ ಓದಲು ಸಾಧ್ಯವಾಗದೆ ಬಡತನ ನೀಗಿಸಲು ದುಡಿಮೆ ಅನಿವಾರ್ಯವಾಯಿತು. ಸಾಕಷ್ಟು ಜನರನ್ನು ಭೇಟಿ ಮಾಡಿ, ಹಲವಾರು ಇಲಾಖೆಗಳಲ್ಲಿ ಪ್ರಯತ್ನ ಪಟ್ಟರು ಯಾವುದೂ ನೆರವಿಗೆ ಬರಲಿಲ್ಲ ಕಾರಣ ನಿಗದಿತ ವಯಸ್ಸಿಗಿಂತ ನನ್ನ ವಯಸ್ಸು(34)ಹೆಚ್ಚಾಗಿರುವುದು. ಕೆಲವು





ಇಲಾಖೆಗಳಲ್ಲಿ ವಿಶೇಷ ಕೋಟದಡಿ ಉದ್ಯೋಗ ಪಡೆಯಲು ಅವಕಾಶ ಇರುವುದಾಗಿ ತಿಳಿದು ಅಧಿಕಾರಿಗಳ, ಮುಖಂಡರ, ಪ್ರತಿಷ್ಠಿತರ ಕೈ,ಕಾಲು ಹಿಡಿದರು ಪ್ರಯೋಜನಕ್ಕೆ ಬರುತ್ತಿಲ್ಲ.

ನನಗಿಂತ ಕಡಿಮೆ ಕ್ರೀಡಾಸಾಧನೆ ಮಾಡಿದವರಿಂದು ಹಲವು ಇಲಾಖೆಗಳಲ್ಲಿ ಸರ್ಕಾರಿ ಉದ್ಯೋಗವನ್ನು ಪಡೆದಿರುವುದನ್ನು ತಿಳಿದ ತಂದೆ ದಿನನಿತ್ಯ ಕೊರಗುತ್ತಿದ್ದಾರೆ. ಬಡತನದಲ್ಲಿ ನಿನ್ನನ್ನು ಬೆಳೆಸಿ ಸಾಧನೆ ಮಾಡಲು ಸಹಕರಿಸಿದೆವು ಅದರ ಪರಿಣಾಮ ಕರ್ನಾಟಕಕ್ಕೆ ಕೀರ್ತಿಯನ್ನು ತಂದಿರುತ್ತೀಯ ಆದರೆ ಏನು ಮಾಡುವುದು ನಿನ್ನನ್ನು ಒಂದು ಸರ್ಕಾರಿ ಹುದ್ದೆಯಲ್ಲಿ ನೋಡಲು ಸಾಧ್ಯವಾಗುತ್ತಿಲ್ಲ. ವೈಯಕ್ತಿಕ ಆಟಗಳಲ್ಲಿ ನೀನು ತೊಡಗಿಕೊಂಡಿದ್ದರೆ ನಿನ್ನನ್ನು ಎಲ್ಲರೂ ಗುರುತಿಸುತ್ತಿದ್ದರು ಆದರೆ ನೀನು ಗುಂಪು ಆಟದಲ್ಲಿ ಭಾಗವಹಿಸಿದ ಕಾರಣ ನಿನ್ನನ್ನ ಯಾರು ಗುರುತಿಸುತ್ತಿಲ್ಲ ಎಂದು ಬೇಸರಿಸಿಕೊಳ್ಳುತ್ತಾರೆ ಎಂದು ಅಳಲು ಆರಂಭಿಸಿದರು ಮುನೀರ್.

ಮಾತನ್ನು ಮುಂದುವರಿಸಿ ಹೊಟ್ಟೆ ಪಾಡಿಗಾಗಿ ಭದ್ರಾವತಿ ನಗರಸಭೆ 'ವಾಟರ್ ಪಂಪ್ ಹೌಸ್ ನಲ್ಲಿ ಆಪರೇಟರ್' ಕೆಲಸ ಮಾಡಿ ವಯಸ್ಸಾದ ತಂದೆ ತಾಯಿಯನ್ನು ಸಾಕುತ್ತಿದ್ದೇನೆ. ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ ಯಾವುದಾದರೂ ಒಂದು ಸರ್ಕಾರಿ ಕೆಲಸವನ್ನ ಸಿಗುವಂತೆ ಮಾಡಿ ಸರ್ ಯಾರಾದರೂ ಟಿ.ವಿ ಮಾಧ್ಯಮದ ಮಿತ್ರರು ಇದ್ದರೆ ಹೇಳಿ ನಾನು ಅವರೊಂದಿಗೆ ಮಾತನಾಡಿ ಸರ್ಕಾರಕ್ಕೆ ಬೇಡಿಕೊಳ್ಳುತ್ತೇನೆ ಎಂದಾಗ ಲೇಖಕ ಹಾಗೂ ದೈಹಿಕ ಶಿಕ್ಷಣ ಶಿಕ್ಷಕನಾದ ನಾನು ಏನು ಹೇಳಬೇಕು ಎಂದು ತೋಚದೆ, ಒಬ್ಬ ನಾಡು ಕಂಡ ಶ್ರೇಷ್ಠ ಕ್ರೀಡಾಪಟುವಿನ ಸ್ಥಿತಿಯನ್ನು ಕೇಳಿ ದುಃಖಿತನಾಗಿ ದೂರವಾಣಿಯನ್ನು ಸ್ಥಗಿತಗೊಳಿಸಿ ಬಹಳ ಭಾವುಕನಾದೆ.

ಉಪವಾಸ, ಹೊಟ್ಟೆ ಬಟ್ಟೆ ಕಟ್ಟಿ ಮಗ ದೇಶದ ಆಸ್ತಿಯಾಗಲಿ, ಕರ್ನಾಟಕಕ್ಕೆ ಕೀರ್ತಿ ತರಲಿ ಎಂದು ನಾನು ನನ್ನ ಹೆಂಡತಿ ಶ್ರಮಪಟ್ಟೆವು ಅದು ಹೆಸರನ್ನು ತಂದುಕೊಟ್ಟಿತು ಆದರೆ ಮಗನ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಬಹಳಷ್ಟು ಸಂಕಟವಾಗುತ್ತದೆ. ಬೆಳಗಿನ ಜಾವ ಕ್ರೀಡಾ ಸಮವಸ್ತ್ರವನ್ನು ಧರಿಸಿ ಮೈದಾನಕ್ಕೆ ಹೋಗುತ್ತಿದ್ದ ಇಂದು ಅದೇ ಧಿರಿಸಿನೊಂದಿಗೆ ವಾಟರ್ ಪಂಪ್ ಹೌಸ್ಗೆ ಹೋಗುತ್ತಿರುವುದು ಕಣ್ಣಿನಿಂದ ನೋಡಲು ಸಾಧ್ಯವಾಗುತ್ತಿಲ್ಲ ದಯಮಾಡಿ ಮಗನಿಗೆ ಸಹಾಯ ಮಾಡಿ ಎಂದು ಕೈಮುಗಿದು ವಿನಂತಿಸುತ್ತಾರೆ ದಂಪತಿಗಳಿಬ್ಬರು.

ಯಾರೂ ಕೂಡ ಬಡವರಾಗಿ ಹುಟ್ಟಬೇಕೆಂದು ದೇವರಲ್ಲಿ ಬೇಡಿ ಬಂದಿರುವುದಿಲ್ಲ. ಪರಿಸ್ಥಿತಿಗಳು ನಮ್ಮನ್ನು ಸಾಕಷ್ಟು ಪರೀಕ್ಷೆಗಳಿಗೆ ಒಡ್ಡುತ್ತವೆ, ವೈಜ್ಞಾನಿಕ ತರಬೇತಿ, ತರಬೇತುದಾರರ ಸಲಹೆ, ಮಾರ್ಗದರ್ಶನಗಳನ್ನು ಪಡೆದುಕೊಳ್ಳಿ, ವಯಸ್ಸು ಮತ್ತು ಉತ್ತಮ ಪರ್ಫಾರ್ಮೆನ್ಸ್ ಇರುವಾಗಲೇ ಯಾವುದಾದರೂಂದು ಉದ್ಯೋಗಕ್ಕೆ ಸೇರಿಕೊಳ್ಳಿ ಆರ್ಥಿಕ ಸಬಲತೆಯು ಕ್ರೀಡಾ ಸಾಧನೆಯ ಮೆಟ್ಟಿಲು ಎಂಬುದನ್ನು ಮರೆಯದಿರಿ ಎಂದು ಕ್ರೀಡಾಪಟುಗಳಿಗೆ ಕಿವಿಮಾತು ಹೇಳುತ್ತಾರೆ.

ಕ್ರೀಡಾಭಿಮಾನಿಗಳು, ಪ್ರೋತ್ಸಾಹದಾಯಕರು ಯುವಕನಲ್ಲಿರುವ ಪ್ರತಿಭೆಗೆ ನೀರೆರೆದು ಪ್ರೋತ್ಸಾಹಿಸುವವರು ಸಹಾಯದ ನಿರೀಕ್ಷೆಯಲ್ಲಿರುವ ಮುನೀರ್ ಬಾಷಾ ದೂರವಾಣಿ ಸಂಖ್ಯೆ:–8151990347, 8618398688 ಸಂಪರ್ಕಿಸಬಹುದು.

# ನಾನು ನಾಸ್ತಿಕನಲ್ಲ, ನಮ್ಮೂರಲ್ಲೂ ರಾಮನ ಗುಡಿ ಕಟ್ಟಿಸಿದ್ದೇನೆ

### ಸಿ.ಎಂ.ಸಿದ್ದರಾಮಯ್ಯ ಹೇಳಿಕೆ । ಅಧರ್ಮದ–ಅಮಾನವೀಯ ಕೆಲಸ ಮಾಡಿ ನಾಟಕೀಯವಾಗಿ ಪೂಜೆ ಮಾಡಿದರೆ ಆ ಪೂಜೆಯನ್ನು ದೇವರು ಒಪ್ಪಿಕೊಳ್ಳಲ್ಲ

■ **ಹಂಪಿ ಟೈಮ್ಸ್ ಬೆಂಗಳೂರು**

ಅಧರ್ಮದ–ಅಮಾನವೀಯ ಕೆಲಸ ಮಾಡಿ ನಾಟಕೀಯವಾಗಿ ಪೂಜೆ ಮಾಡಿದರೆ ಆ ಪೂಜೆಯನ್ನು ದೇವರು ಒಪ್ಪಿಕೊಳ್ಳಲ್ಲ. ಸಕಲ ಜೀವಗಳೂ ಸಮಾನತೆ, ಪ್ರೀತಿಯಿಂದ ಬಾಳಬೇಕು ಎನ್ನುವುದು ಆದರ್ಶ ಶ್ರೀರಾಮ ಆಶಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಬಿದರಹಳ್ಳಿ ಹೋಬಳಿಯ, ಹಿರಂಡಹಳ್ಳಿ ಶ್ರೀರಾಮ ಟೆಂಪಲ್ ಟ್ರಸ್ಟ್ ನಿರ್ಮಿಸಿದ್ದ ಸಕುಟುಂಬ ಸಮೇತನಾಗಿರುವ ರಾಮ ಸೀತ ಲಕ್ಷ್ಮಣ ದೇವಾಲಯ ಹಾಗೂ 33 ಅಡಿ ಎತ್ತರದ ಏಕಶಿಲಾ ಆಂಜನೇಯ ಸ್ವಾಮಿ ವಿಗ್ರಹದ ಶಿಲಾ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಬಳಿಕ ಮಹಾ ಕುಂಭಾಭಿಷೇಕದಲ್ಲಿ ಪಾಲ್ಗೊಂಡು ಮಾತನಾಡಿದರು. ನಾನು ನಾಸ್ತಿಕನಲ್ಲ–ಆಸ್ತಿಕ. ನಮ್ಮೂರಲ್ಲೂ ರಾಮನ ಗುಡಿ ಕಟ್ಟಿಸಿದ್ದೇನೆ. ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ರಾಮನ ಗುಡಿಗಳು ಇವೆ. ಪ್ರತಿಯೊಬ್ಬರೂ ಅವರವರ ನಂಬಿಕೆಯಂತೆ ರಾಮನನ್ನು ಪೂಜಿಸುತ್ತಾತ್ತೇವೆ, ಗುಡಿ ಕಟ್ಟುತ್ತೇವೆ, ಪೂಜಿಸುತ್ತೇವೆ ಎಂದರು.

ಯಾವುದೇ ಧರ್ಮ ಜಾತಿ–ಧರ್ಮ ಆಧಾರದ



ಮನುಷ್ಯ ದ್ವೇಷವನ್ನು ಹೇಳುವುದಿಲ್ಲ. ಶ್ರೀರಾಮ ಸಮಾಜಮುಖಿ ಆಗಿದ್ದರು. ಒಬ್ಬ ಮಡಿವಾಳನ ಮಾತಿಗೂ ಬೆಲೆ ಕೊಟ್ಟರು. ಪಿತೃವಾಕ್ಯ ಪರಿಪಾಲನೆಗೆ ವನವಾಸಕ್ಕೆ ಹೋದರು. ಶ್ರೀರಾಮ, ಲಕ್ಷ್ಮಣ, ಸೀತೆ, ಆಂಜನೇಯರನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಇವರೆಲ್ಲಾ ಸಕುಟುಂಬಸ್ಥರು ಎಂದು ವಿವರಿಸಿದರು. ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯ ಶ್ರೀರಾಮನ ಆದರ್ಶ ಮತ್ತು ವ್ಯಕ್ತಿತ್ವದಲ್ಲಿದೆ. ಮನುಷ್ಯ ಮನುಷ್ಯನನ್ನು ದ್ವೇಷಿಸಬಾರದು ಎನ್ನುವುದೇ ರಾಮಾಯಣ, ಮಹಾಭಾರತದ ಸಂದೇಶ ಎಂದು ವಿವರಿಸಿದರು. ಪರಿಶಿಷ್ಠ ಪಂಗಡ ಸಮುದಾಯದ ವಾಲ್ಮೀಕಿ ಅವರು ರಾಮಾಯಣವನ್ನು ಬರೆದು ವಿಶ್ವಕ್ಕೆ ಕೊಟ್ಟರು. ದೇವರು ನಮ್ಮ ಆತ್ಮ ಮತ್ತು ಶರೀರದಲ್ಲೇ ಇದ್ದಾನೆ ಎಂದು ಬಸವಣ್ಣನವರು ನುಡಿದರು. ದೇಹವೇ ದೇಗುಲ ಎನ್ನುವ ಸಂದೇಶವನ್ನು ಮನುಷ್ಯ ಪ್ರಪಂಚಕ್ಕೆ ನೀಡಿದ್ದಾರೆ ಎಂದು ವಚನಗಳನ್ನು ಉದಾಹರಿಸಿದರು.

ಜೈ ಶ್ರೀರಾಮ್ ಎನ್ನುವುದು ಯಾರದ್ದೋ ಖಾಸಗಿ ಸ್ವತ್ತಲ್ಲ. ಅದು ಪ್ರತಿಯೊಬ್ಬ ಭಕ್ತರ ಸ್ವತ್ತು ಎನ್ನುತ್ತಾ ತಾವೂ ಜೈ ಶ್ರೀರಾಮ್ ಘೋಷಣೆ ಕೂಗಿ ನೆರೆದಿದ್ದ ಸಾರ್ವಜನಿಕರಿಗೂ ಘೋಷಣೆ ಕೂಗಿಸಿದರು.

ಸಚಿವರಾದ ಬೈರತಿ ಸುರೇಶ್, ಈಶ್ವರ್ ಖಂಡ್ರೆ, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ರಾದ ಪ್ರೊ ಎಂವಿ ರಾಜೀವ್ ಗೌಡ ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ, ಮಾಜಿ ಸಚಿವರಾದ ಎಚ್.ಎಂ.ರೇವಣ್ಣ, ಅರವಿಂದ ಲಿಂಬಾವಳಿ ಸೇರಿ ಹಲವು ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಕವಿ ಮನಸು**

## ಜಯ ಜಯ ರಾಮ



ಜಯ ಜಯ ರಾಮ
ಜಯ ಘನ ಶಾಮ
ಜಯ ಜಯ ಶ್ರೀ ರಾಮ
ರಾಮ ಜಯ ಜಯ ಶ್ರೀ ರಾಮ

ಜಾನಕಿ ರಮಣ
ಭವ ಭಯ ಹರಣ
ಜಯ ಜಯ ಶ್ರೀ ರಾಮ
ರಾಮ ಜಯ ಜಯ ಶ್ರೀರಾಮ

ದಶರಥ ಕಂದ
ಧರೆಯೋಳು ಬಂದ
ಜಯ ಜಯ ಶ್ರೀ ರಾಮ
ರಾಮ ಜಯ ಜಯ ಶ್ರೀ ರಾಮ

ಪಿತೃ ವಾಕ್ಯ ಪರಿಪಾಲಕ
ಪಯಣ ವನವಾಸಕ
ಜಯ ಜಯ ಶ್ರೀ ರಾಮ
ರಾಮ ಜಯ ಜಯ ಶ್ರೀ ರಾಮ

ತ್ರಿಭುವನ ಪೋಷಕ
ಕಷ್ಟ ನಿವಾರಕ
ಜಯ ಜಯ ಶ್ರೀ ರಾಮ
ರಾಮ ಜಯ ಜಯ ಶ್ರೀ ರಾಮ

– ಕೆ ಎಂ ಬಸವರಾಜ
ಹೊಸಪೇಟೆ

## ಸಂಸ್ಕಾರ.

ಸಪ್ತ ಸಾಗರದಲ್ಲಿ ಮುಳುಗೆದ್ದರು,
ಸಪ್ತ ಗಿರಿಯನ್ನು ಬರಿಗಾಲಲ್ಲಿ ಹತ್ತಿದರು,
ಸಪ್ತ ರಿಷಿಗಳ ಕಾಲುಗಳಿಗೆ ಎರಗಿದ
ಮಾತ್ರಕ್ಕೆ
ಆಗದಯ್ಯ ಸಂಸ್ಕೃತಿಯ ಸಾಕಾರ
ವ್ಯಕ್ತಿಯ ನಡೆ, ನುಡಿ, ಯೋಚನೆಯಲ್ಲಿ
ಅಡಗಿದ್ದರೆ ಅಷ್ಟೇ ಉತ್ತಮ ಸಂಸ್ಕಾರ
ಪ್ರತಿಯೊಬ್ಬರ ಬಾಳಗುವುದು ಮಾದರಿ
ಸಂಸಾರ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 22-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.86 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 79 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.128 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.03 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8737 ಕ್ಯುಸೆಕ್ |
| ಸಾಮರ್ಥ್ಯ | 58.642 ಟಿಎಂಸಿ |

**ಓದುಗರ ಗಮನಕ್ಕೆ**


ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಶ್ರೀ ರಾಮಚಂದ್ರನ ರಕ್ಷಕ ಆಂಜನೇಯ

## ಸಚಿವೆ ಶೋಭಾ ಕರಂದ್ಲಾಜೆ । ಅಂಜನಾದ್ರಿ ಬೆಟ್ಟದಲ್ಲಿ ಸ್ವಚ್ಛ ತೀರ್ಥ ಕಾರ್ಯಕ್ರಮ

■ ಹಂಪಿ ಟೈಮ್ಸ್ ಕೊಪ್ಪಳ

ಜನವರಿ 22ರಂದು ಅಯೋಧ್ಯೆಯಲ್ಲಿ ನಡೆಯಲಿರುವ ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಇಲಾಖೆ ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರು ರಾಮ ಭಕ್ತ ಹನುಮನ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದಲ್ಲಿ ಜನವರಿ 21ರಂದು ಸ್ವಚ್ಛ ತೀರ್ಥ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿ, ಸ್ವಚ್ಛತಾ ಸೇವೆ ಸಲ್ಲಿಸಿದರು.




ಸಚಿವರು, ಅಂಜನಾದ್ರಿ ಬೆಟ್ಟದ ಮೇಲಿರುವ ದೇವಸ್ಥಾನದಲ್ಲಿ ಆಂಜನೇಯ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಸ್ವಚ್ಛತಾ ಸೇವೆ ಸಲ್ಲಿಸಿದರು. ಅಯೋಧ್ಯೆಗೆ ತಲುಪಿಸಲು ರಾಮಭಕ್ತೆ ಶಬರಿ ಗುಹೆಯ ಬಾರೆ ಹಣ್ಣುಗಳನ್ನು ಭಕ್ತರು ಸಚಿವರಿಗೆ ನೀಡಿದರು.

ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಇಲಾಖೆ ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರು ಇದೆ ವೇಳೆ ಮಾತನಾಡಿ, ಶ್ರದ್ಧಾ ಕೇಂದ್ರವಾದ ಅಯೋಧ್ಯೆಯಲ್ಲಿ ಜ.22ಕ್ಕೆ ಜರುಗಲಿರುವ ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ. ಶ್ರೀ ರಾಮನಿಗೆ ಸಾಥ್ ಕೊಟ್ಟಿದ್ದು ಹಾಗೂ ಶ್ರೀ ರಾಮಚಂದ್ರನನ್ನು ರಕ್ಷಣೆ ಮಾಡಿದ್ದು ಆಂಜನೇಯ. ಸೀತಾ ಮಾತೆಯನ್ನು ಹುಡುಕಿದ್ದು, ರಾಮನಿಗಾಗಿ ಸೇತುವೆ ನಿರ್ಮಾಣ ಹಾಗೂ ಸಂಜೀವಿನಿಗಾಗಿ ಬೆಟ್ಟವನ್ನೇ ಹೊತ್ತು ತಂದವರು ಆಂಜನೇಯ. ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ನಿಮಿತ್ತ ಪವನಪುತ್ರ ಹನುಮನ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗಿದೆ. ರಾಮನ ಬರುವಿಕೆಗಾಗಿ ಹಲವಾರು ಬಾರಿ ಕಾದು, ರಾಮನಿಗಾಗಿ ಬಾರೆ ಹಣ್ಣುಗಳನ್ನು ನೀಡಿದ್ದ ರಾಮಭಕ್ತೆ ಶಬರಿಯ ಗುಹೆ ಸ್ಥಳದಿಂದ ಪ್ರಸಾದದ ರೂಪದಲ್ಲಿ ಭಕ್ತರು ನೀಡಿದ ಬಾರೆ ಹಣ್ಣುಗಳನ್ನು ಅಯೋಧ್ಯೆಗೆ ತಲುಪಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕರಡಿ ಸಂಗಣ್ಣ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಸೇರಿದಂತೆ ಹಲವು ಗಣ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ: ಹನುಮನ ವಿಶೇಷ ಪೂಜೆಗೂ ಪೂರ್ವದಲ್ಲಿ ಸಚಿವರು, ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮದ ರಥಕ್ಕೆ ಚಾಲನೆ ನೀಡಿದರು.



**ಅಯೋಧ್ಯೆಯಲ್ಲಿ ಶತಮಾನಗಳ ಕನಸು ನನಸಾದ ರಾಮ ಮಂದಿರ ನಿರ್ಮಾಣ, ರಾಮ ಲಲ್ಲಾ ಪ್ರಾಣಪ್ರತಿಷ್ಠಾಪನಾ ನಿಮಿತ್ತ ವಿಜಯನಗರ ಜಿಲ್ಲೆ ಹೊಸಪೇಟೆಯ ಸ.ಕಿ.ಪ್ರಾ.ಶಾಲೆ 88 ಮುದ್ಲಾಪುರ ವಿದ್ಯಾರ್ಥಿಗಳು ಶ್ರೀ ರಾಮ, ಲಕ್ಷ್ಮಣ, ಸೀತೆ, ಹನುಮಂತ ವೇಷಧಾರಿಯಾಗಿ ಎಲ್ಲರ ಗಮನಸೆಳೆದರು. ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಸವರಾಜ.ಕೆ, ಶಿಕ್ಷಕಿ ರಾಧ ಇದ್ದರು.**




**ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನಾ ನೇರ ಪ್ರಸಾರವನ್ನು ಭಕ್ತರು ಕಣ್ತುಂಬಿಕೊಳ್ಳಲು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ರಾಣಿಸಂಯುಕ್ತಾ ಹೊಸಪೇಟೆಯಲ್ಲಿ ವಿಶೇಷ ಎಲ್ಇಡಿ ಪರದೆ ವ್ಯವಸ್ಥೆ ಮಾಡಿದ್ದರು.**

# ಸ್ಕೌಟ್ಸ್, ಗೈಡ್ಸ್‌ನಿಂದ ಸೇವಾಮನೋಭಾವ ಹೆಚ್ಚಳ

■ ಹಂಪಿ ಟೈಮ್ಸ್ ಬಳ್ಳಾರಿ

ಸ್ಕೌಟ್ಸ್ ಮತ್ತು ಗೈಡ್ಸ್ ಸಮಾಜಮುಖಿ ಕೆಲಸಗಳು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವಾ ಮನೋಭಾವ ಬೆಳೆಸುವಲ್ಲಿ ಸಹಕಾರಿಯಾಗುತ್ತದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬಳ್ಳಾರಿ ವತಿಯಿಂದ ನಗರದ ವಾಲ್ಮೀಕಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ 7 ದಿನಗಳ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್ಸ್ ಹಾಗೂ ಗೈಡ್ ಕ್ಯಾಪ್ಟನ್ಸ್ ಗಳ ಮೂಲ ತರಬೇತಿ ಶಿಬಿರವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ಒಂದು ವಾರ ಪಡೆದಿರುವ ತರಬೇತಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಾಕ್ಷಿಯಾಗಬೇಕು, ನಿಮ್ಮ ಶಾಲೆಯ ಮಕ್ಕಳ ವಿಕಾಸದ ಜತೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆಯುವಂತಹ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸಾಮರ್ಥ್ಯ ಒಬ್ಬ ಶಿಕ್ಷಕರಲ್ಲಿದ್ದು, ಪ್ರತಿಯೊಬ್ಬರು ಇದರ ನಿಯಮಗಳನ್ನು ಪಾಲಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು, ತಮ್ಮ ಬಾಲ್ಯ ಶಿಕ್ಷಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ನಲ್ಲಿ ಸೇರಿದ ನೆನಪುಗಳನ್ನು ಮೆಲುಕು ಹಾಕಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯಪ್ರಧಾನ ಆಯುಕ್ತರಾದ ಪಿ.ಜಿ.ಆರ್.ಸಿಂಧ್ಯ ಅವರು ಮಾತನಾಡಿ, ಸೇವಾ ಮನೋಭಾವನೆಯಿಂದ ಶ್ರಮಿಸುತ್ತಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ತ್ಯಾಗದ ಮತ್ತೊಂದು ಶಬ್ಧವಾಗಿದೆ. ಸೇವಾ ಮನೋಭಾವನೆಯನ್ನು ರೂಪಿಸುವುದೇ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.




ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಮಾಜಮುಖಿ ಕೆಲಸಗಳು ಮತ್ತು ಪ್ರತಿಯೊಬ್ಬರಲ್ಲಿ ದೇಶ ಪ್ರೇಮ ಸಾರುವ ಯೋಜನೆಗಳನ್ನು ಮನಗಂಡಿರುವ ಸರಕಾರವು ಆಯವ್ಯಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಕ್ಕೆ ಪ್ರತ್ಯೇಕ ಅನುದಾನ ಮೀಸಲಿಟ್ಟಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ನೀಡುವ ಮೂಲಕ ಅನೇಕ ಅನುಕೂಲಗಳನ್ನು ಸರಕಾರ ಮಾಡುವುದರಿಂದ ಶಿಕ್ಷಕರು ಮತ್ತು ಮಕ್ಕಳು ಮುಕ್ತವಾಗಿ ಭಾಗವಹಿಸಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅನುಕೂಲ ಪಡೆಯುವ ಜತೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಿ ಎಂದರು.

ಒಂದು ವಾರಗಳ ಕಾಲ ತರಬೇತಿ ಪಡೆದ ಶಿಕ್ಷಕರಿಗೆ ಉತ್ತಮವಾಗಿ ತರಬೇತಿ ಪಡೆದು ಸ್ಕೌಟ್ಸ್ ಹಾಗೂ ಗೈಡ್ಸ್ ಶಿಕ್ಷಕರಾಗಲು ಸಮರ್ಥರು ಎಂಬುದಾಗಿ ದೀಕ್ಷೆ ನೀಡುವ ಮೂಲಕ ಬ್ಯಾಡ್ಜ್ ನೀಡಲಾಗುತ್ತದೆ. ಇದರ ಜತೆ ತರಬೇತಿ ಪ್ರಶಸ್ತಿ ಪತ್ರ ನೀಡಲಾಗುತ್ತದೆ.

ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ 88 ಜನ ಶಿಕ್ಷಕರು ಹಾಗೂ ಗೈಡ್ಸ್ ವಿಭಾಗದಲ್ಲಿ 126 ಶಿಕ್ಷಕಿಯರು ಸೇರಿದಂತೆ ಒಟ್ಟು 214 ಜನ ಶಿಕ್ಷಕರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಬಳ್ಳಾರಿ ಕೇಂದ್ರಸ್ಥಾನದ ಕಲ್ಯಾಣ ಕರ್ನಾಟಕ ಹಾಗೂ ರೇಂಜರಿಂಗ್ ವಿಭಾಗದ ಉಸ್ತುವಾರಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಮಲ್ಲೇಶ್ವರಿ ಜುಜಾರೆ, ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ನ ಅಧ್ಯಕ್ಷ ವೀರೇಶ್, ಉಪಾಧ್ಯಕ್ಷರಾದ ಎಂ.ಟಿ.ಮಲ್ಲೇಶಪ್ಪ, ಜಿಲ್ಲಾ ಖಜಾಂಚಿ ವಿ.ಪ್ರಭಾಕರ್, ಜಿಲ್ಲಾ ತರಬೇತಿ ಆಯುಕ್ತರಾದ ಜಯಶ್ರೀ ಜೋಷಿ, ನಾಗರಾಜ, ತಾಲೂಕು ಕಾರ್ಯದರ್ಶಿಗಳಾದ ಜಿ.ಎಸ್.ಸೋಮಪ್ಪ, ಚಂದ್ರಯ್ಯ ಹಿರೇಮಠದ್, ನಟರಾಜ ಸ್ವಾಮಿ, ಜಿಲ್ಲಾ ಸಂಘಟಕರಾದ ಮೆಹಬೂಬ್ ಭಾಷ ಸೇರಿದಂತೆ ರೋವರ್ಸ್ ಮತ್ತು ರೇಂಜರ್ಸ್ ತರಬೇತುದಾರರು ಹಾಗೂ ಸ್ಕೌಟ್ಸ್ ಮಾಸ್ಟರ್ಸ್ ಹಾಗೂ ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

# ಬರಗಾಲದಲ್ಲೂ ಮಿಶ್ರ ಬೆಳೆ ಬೆಳೆದು ಸಾಧನೆಗೈದ ರೈತ



■ ಹಂಪಿ ಟೈಮ್ಸ್ ಕೊಪ್ಪಳ

ಬರಗಾಲದಲ್ಲೂ ಮಿಶ್ರ ಬೆಳೆ ಬೆಳೆದು ಸಾಧನೆಗೈದ ಜಿಲ್ಲೆಯ ಕುಕನೂರು ತಾಲ್ಲೂಕಿನ ಬನ್ನಿಕೊಪ್ಪ ಗ್ರಾಮದ ರೈತರಾದ ಮುದುಕಪ್ಪ ದೇವರ ಹಾಗೂ ಅವರ ಮಗ ವಿನೋದ ದೇವರ ಎಂಬುವವರು ಇತರ ರೈತರಿಗೆ ಮಾದರಿಯಾಗಿದ್ದಾರೆ.

ಮುದುಕಪ್ಪ ದೇವರ ರವರು ಒಬ್ಬ ಪ್ರಗತಿಪರ ರೈತ ಹಾಗೂ ಉದ್ಯಮಿಯಾಗಿರುವ ಇವರು ಒಟ್ಟಾರೆ ನೂರಾರು ಎಕರೆ ಜಮೀನು ಹೊಂದಿದ್ದು, ಜೆ.ಸಿ.ಬಿ ಮಾಲೀಕರಾಗಿದ್ದಾರೆ. ಅಲ್ಲದೇ ತಮ್ಮದೇ ಸ್ವಂತ ಜೆ.ಸಿ.ಬಿ ಗ್ಯಾರೇಜ ಹೊಂದಿದ್ದಾರೆ. ಊರಿನ ಮುಖಂಡರಲ್ಲಿ ಒಬ್ಬರಾದ ಮುದುಕಪ್ಪ ದೇವರ ಹಾಗೂ ಮಗ ವಿನೋದ ದೇವರ ಇಬ್ಬರೂ ಇದೇ ಜಮೀನಿನಲ್ಲಿ ಪ್ರತಿ ವರ್ಷ ಮಳೆಯಾಶ್ರಯದಲ್ಲಿ ಕಡಲೆ, ಈರುಳ್ಳಿ, ಕೊತ್ತಂಬರಿ ಹಿಂಗಾರು ಜೋಳ, ಗೋಧಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ.

2023–24ನೇ ಸಾಲಿನಲ್ಲಿ ತೀವ್ರ ಬರಗಾಲವಿದ್ದರೂ 30 ಎಕರೆಗೂ ಹೆಚ್ಚು ಕಡಲೆ, 4 ಎಕರೆ ಸೂರ್ಯಕಾಂತಿ ಬೆಳೆದಿರುತ್ತಾರೆ. ಇದಲ್ಲದೇ 2.5 ಎಕರೆ ಜಮೀನಿನಲ್ಲಿ ಹಿಂಗಾರು ಜೋಳ, ಮೆಣಸಿನಕಾಯಿ ಮತ್ತು ಈರುಳ್ಳಿ ಬೆಳೆಗಳನ್ನು ಒಟ್ಟಿಗೆ ಮಿಶ್ರ ಬೆಳೆಯಾಗಿ ಬೆಳೆದಿರುವುದೇ ಇವರ ಸಾಧನೆ.

ಅಕ್ಟೋಬರ ತಿಂಗಳಿನಲ್ಲಿ ಡಬ್ಬಿ ಮೆಣಸಿನಕಾಯಿ ಜೊತೆ ನಾಸಿಕ ತಳಿಯ ಈರುಳ್ಳಿಯನ್ನು ನಾಟಿ ಮಾಡಿದ್ದಾರೆ. ನವಂಬರನಲ್ಲಿ ಒಂದು ಮಳೆಯಾದಾಗ ಸಾಲುಗಳ ಮಧ್ಯದಲ್ಲಿ ಹಿಂಗಾರು ಜೋಳವನ್ನು ಬಿತ್ತಿದ್ದಾರೆ. ಒಂದು ಸಾರಿ ಕೃಷಿ ಹೊಂಡದ ನೀರನ್ನು ಈ ಬೆಳೆಗಳಿಗೆ ರಕ್ಷಣಾತ್ಮಕವಾಗಿ ನೀರು ಹರಿಸಿದ್ದಾರೆ.

ಜನವರಿ ತಿಂಗಳಿನಲ್ಲಿ ಈ ಎಲ್ಲ ಬೆಳೆಗಳು ಕಟಾವಿಗೆ ಸಿದ್ದವಾಗಿದ್ದು, ಸುಮಾರು ರೂ. 3 ಲಕ್ಷ ಆದಾಯವನ್ನು ಅವರು ನಿರೀಕ್ಷಿಸಿರುತ್ತಾರೆ. ಇವರ ತೋಟಕ್ಕೆ ವಿಜ್ಞಾನಿಗಳು ಭೇಟಿ ನೀಡಿದಾಗ ಮೂರು ಮಿಶ್ರ ಬೆಳೆಗಳು ಉತ್ತಮವಾಗಿ ಬೆಳೆದಿರುವುದನ್ನು ಕಂಡು ಈ ರೈತರ ಪ್ರಯತ್ನವನ್ನು ಶ್ಲಾಘೀಸಿದ್ದಾರೆ. ಇದೇ ಸಮಯದಲ್ಲಿ ಹೊಲದಲ್ಲಿ ಬೆಳೆದ ಕಡಲೆ, ಸೂರ್ಯಕಾಂತಿ ಹಾಗೂ ಗೋಧಿ ಬೆಳೆಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮುದುಕಪ್ಪನವರು ಸಾಹುಕಾರರಾಗಿದ್ದರೂ, ವಿನಯವಂತಿಕೆಯಿಂದ ಎಲ್ಲ ಅಧಿಕಾರಿಗಳು ಹಾಗೂ ವಿಜ್ಞಾನಿಗಳೊಂದಿಗೆ ಬೆರೆಯುತ್ತಾರೆ. ಊರಿನಲ್ಲಿಯೂ ಕೂಡ ಯಾವುದೇ ರೈತರಿಗೆ ಸಂಕಷ್ಟವಾದಾಗ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರದಿಂದ ಪರಿಹಾರ ಕೊಡಲು ಸಹಕಾರ ನೀಡುತ್ತಾರೆ. ಹೀಗೆ ಮುದುಕಪ್ಪನವರು ಒಬ್ಬ ಪ್ರಗತಿಪರ ರೈತ ಹಾಗೂ ಉದ್ಯಮಿ ಅಷ್ಟೇ ಅಲ್ಲದೇ ಕೃಷಿಯಲ್ಲಿಯೂ ಕೂಡ ಉತ್ತಮ ಪ್ರಯೋಗ ಮಾಡುತ್ತಾ, ಸಾಧನೆಗೈದ ಒಬ್ಬ ಮಾದರಿ ರೈತರೆನಿಸಿಕೊಳ್ಳುತ್ತಾರೆ. ಇವರೇ ಹೇಳುವ ಹಾಗೆ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ ವಿಜ್ಞಾನಿಗಳ ಸಲಹೆಯಂತೆ ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳುವುದು ಬಹುಮುಖ್ಯವಾಗಿದ್ದು, ತಮ್ಮ ಸಾಧನೆಗೆ ಫಲವತ್ತಾದ ಜಮೀನೇ ಕಾರಣ ಎನ್ನುತ್ತಾರೆ ಮುದುಕಪ್ಪ.

ಬರಗಾಲದಲ್ಲೂ ಕೃಷಿ ಹೊಂಡದ ನೀರು ಬಳಸಿ ಮೂರೂ ಬೆಳೆಗಳನ್ನು ಯಶಸ್ವಿಯಾಗಿ ಬೆಳೆದಿರುವುದು ಅಪರೂಪದ ಸಾಧನೆ. ಎಲ್ಲ ರೈತರು ಈ ರೀತಿ ಮಿಶ್ರಬೆಳೆ ಬೆಳೆದಲ್ಲಿ ಆದಾಯ ದ್ವಿಗುಣಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಕೃಷಿ ವಿಸ್ತರಣ ಕೇಂದ್ರದ ವಿಸ್ತರಣಾ ಮುಂದಾಳುಗಳಾದ ಡಾ ಎಂ.ವಿ.ರವಿ ಅವರ ರೈತರ ಸಾಧನೆಯನ್ನು ಕೊಂಡಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಬನ್ನಿಕೊಪ್ಪದ ರೈತ ಮುದುಕಪ್ಪ ದೇವರ ಮೊ.ಸಂ. 9449964291, ವಿಸ್ತರಣಾ ಮುಂದಾಳುಗಳಾದ ಡಾ ಎಂ.ವಿ.ರವಿ., ಮೊ.ಸಂ: 9480247745 ಮತ್ತು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ವಾಮನಮೂರ್ತಿ ಮೊ.ಸಂ: 8217696837 ಗೆ ಸಂಪರ್ಕಿಸಬಹುದಾಗಿದೆ.

# ಕೊಟ್ಟೂರಲ್ಲಿ ದೀಪಾರಾಧನೆ




**ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣಪ್ರತಿಷ್ಠಾಪನೆ, ಶ್ರೀರಾಮ ಮಂದಿರ ಲೋಕಾರ್ಪಣೆ ನಿಮಿತ್ತ ಕ್ಷೇತ್ರನಾಥ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದ ಮುಂಭಾಗ ದೀಪ ಹಚ್ಚುವುದರ ಮೂಲಕ ಬಿಜೆಪಿ ಕಾರ್ಯಕರ್ತರು ಭಕ್ತಿ ಸಮರ್ಪಿಸಿದರು.**

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No.1001/2023**

Between: 1. Smt. Kamalamma D/o late Thimmappa aged about 45 years, 2. Nagaraja s/o late Thimmappa aged about 40 years, 3. Smt. Jayamma D/o late Thimmappa, aged about 38 years, 4. Smt. Gangamma D/o late Thimmappa, aged about 35 years, 5. Smt. Honnuramma D/o late Thimmappa, aged about 32 years, 6. Smt. Lalithamma D/o late Thimmappa, aged about 45 years,
All are Hindus, agriculturists, R/o Haravadi Village, in Kudligi Taluk Vijayanagara district. . ..Petitioners And
The Tahasildar, Kudligi .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioners brother by name late H.Parameshwarappa S/o late Thimmappa was died on 13.01.2012. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 24.01.2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12.1.2024

By Order of the court
Chief Ministerial Officer
Civil Judge & J.M.F.C at Kudligi

**Sri. H.Venkatesha, Durugappa.H**
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No.995/2023**

Between: 1. Smt. Basamma w/o late Halappa aged about 80 years,
2. Smt. Eramma W/o late Basappa, aged about 79 years,
3. K.G.Veeresha S/o late Nagappa, aged about 68 years,
All are Hindus, agriculturists, R/o T. Kallahalli Village, in Kudligi Taluk Vijayanagara district. ...Petitioners
And
The Tahasildar, Kudligi .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioner No.1 and 2's mother-in-law & No-3's mother by name late Eramma W/o late Nagappa was died on 05/08/1988 at T. Kallahalli village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 24.01.2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 05.12.2023

By Order of the court
Chief Ministerial Officer
Civil Judge & J.M.F.C at Kudligi

**Sri. Parameshwara. H**
Advocate, Kudligi

# ಹಂಪಿಯಲ್ಲಿ ಹೊಸ ಅನ್ವೇಷಣೆಗಳಾಗಲಿ

## ಯುನೆಸ್ಕೋ ಸಾಂಸ್ಕೃತಿಕ ವಲಯದ ಮುಖ್ಯಸ್ಥರೊಂದಿಗೆ ಜಿಲ್ಲಾಧಿಕಾರಿ ಸಭೆ | ಹಂಪಿ ಅಭಿವೃದ್ಧಿಗೆ ಸಲಹೆ ನೀಡಿದ ಜುನಾಯಿ ಹಾನ್

■ **ಹಂಪಿ ಟೈಮ್ಸ್ ಹೊಸಪೇಟೆ**

ಯುನೆಸ್ಕೋ ವತಿಯಿಂದ ವಿಶ್ವ ಪ್ರಸಿದ್ಧ ಹಂಪಿಗೆ ಆಗಮಿಸಿರುವ ಸೌಥ್ ಕೋರಿಯಾದ ಸಾಂಸ್ಕೃತಿಕ ವಲಯದ ಮುಖ್ಯಸ್ಥರಾದ ಜುನಾಯಿ ಹಾನ್ ಅವರೊಂದಿಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹಾಗೂ ಹಂಪಿಯ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಆಗಿರುವ ಹೊಸಪೇಟೆಯ ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ ಅವರು ಜನವರಿ 21ರಂದು ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಹಂಪಿಯ ಪ್ರದೇಶದ ಈತಿಹ್ಯದ ವಿಶೇಷತೆಗಳು ಹಾಗೂ ಅಭಿವೃದ್ಧಿ ಬಗ್ಗೆ ಮುಖ್ಯವಾಗಿ ಸುಸ್ಥಿರ ಪ್ರವಾಸೋದ್ಯಮದ ಬಗ್ಗೆ ಸುಧೀರ್ಘ ಚರ್ಚೆ ನಡೆಯಿತು.

ಹಂಪಿಯ ಪ್ರದೇಶದ ಸ್ಥಿತಿಗತಿಯ ಬಗ್ಗೆ ಅಧ್ಯಯನ ಮತ್ತು ಚರ್ಚೆ ನಡೆಸಲು ವಿಜಯನಗರ ಜಿಲ್ಲೆಗೆ ಆಗಮಿಸಿದ್ದಾಗಿ ತಿಳಿಸಿದ ಜುನಾಯಿ ಹಾನ್ ಅವರು ಮಾತನಾಡಿ, ಹಂಪಿಯ ವಿರುಪಾಕ್ಷೇಶ್ವರ ದೇವಾಲಯದಿಂದ ಎದುರು ಬಸವಣ್ಣದವರೆಗಿನ ಎರಡು ಕಡೆಯ ಹಂಪಿಯ ಬಜಾರ್ ಕೋಣೆಗಳನ್ನು ದುರಸ್ಥಿ ಮಾಡುವುದರ ಬಗ್ಗೆ ಚರ್ಚಿಸಿದರು.

ಹಂಪಿಗೆ ಬರುವ ಪ್ರವಾಸಿಗರಿಗೆ ಹಂಪಿ ಪ್ರದೇಶದಲ್ಲಿ ಸೂಕ್ತವಾಗಿ ಮೊಬೈಲ್ ಸಿಗ್ನಲ್ ಸಿಗುವುದಿಲ್ಲ. ಇದರಿಂದ ಸಂವಹನಕ್ಕೆ ಕಿರಿಕಿರಿಯಾಗುತ್ತದೆ ಎನ್ನುವ ಅಭಿಪ್ರಾಯವಿದ್ದು ಈ ನಿಟ್ಟಿನಲ್ಲಿ ಆಯಾ ಕಡೆಗಳಲ್ಲಿ ಮೊಬೈಲ್ ಟವರ್ ಅಳವಡಿಸುವುದರ ಬಗ್ಗೆ ಚರ್ಚಿಸಿದರು.



ಶೈಕ್ಷಣಿಕ ಸಂಸ್ಥೆಗಳ ಒಕ್ಕೂಟದ ಸಹಕಾರದೊಂದಿಗೆ ಹಂಪಿಯ ಗೈಡ್ಸ್, ಟ್ಯಾಕ್ಸಿ ಮತ್ತು ಹೊಟೆಲ್ ಸೇರಿದಂತೆ ಟ್ಯೂರಿಸಂ ಸರ್ವಿಸ್ ಪ್ರವಾಡೈರ್ಸ್‌ಗೆ ಒಂದು ವಿಶೇಷ ಕಾರ್ಯಗಾರ ಏರ್ಪಡಿಸುವ ಯೋಜನೆಯಿದ್ದು, ಇದಕ್ಕೆ ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಯು ಸಮಯ ಸಮಯನಿಗದಿಪಡಿಸಿ ಸಹಕಾರ ನೀಡಬೇಕು ಎಂದು ಅವರು ತಿಳಿಸಿದರು.

ಹೆಮ್ಮೆಯ ಸಂಗತಿ: ತನ್ನದೇ ಐತಿಹಾಸಿಕ ಸಂಗತಿಗಳಿಂದ ಹಂಪಿಯು ಪ್ರಸಿದ್ಧವಾಗಿದೆ. ಅದರಂತೆ ಹಂಪಿಯನ್ನು ಇದುವರೆಗೆ ರಕ್ಷಣೆ ಮಾಡಿದ ರೀತಿಯು ಹೆಮ್ಮೆ ಪಡುವಂತದ್ದಾಗಿದೆ. ಈ ಪರಂಪರೆಯನ್ನು ಜಿಲ್ಲಾಡಳಿತವು ಮುಂದುವರೆಸಿಕೊಂಡು ಹೋಗಬೇಕು ಎಂದು ಜುನಾಯಿ ಹಾನ್ ಅವರು ಸಲಹೆ ಮಾಡಿದರು.

ಅನ್ವೇಷಣೆಯಾಗಲಿ: ಹಂಪಿಯ ಇತಿಹಾಸವು ವಿಶಿಷ್ಟ ಹಾಗೂ ವಿಶಾಲತೆಯಿಂದ ಕೂಡಿದೆ. ಈ ಬಗ್ಗೆ ಅಧ್ಯಯನಗಳು ಆಗಬೇಕಿದೆ. ಹೊಸ ಹೊಸ ಅನ್ವೇಷಣೆ ಕಾರ್ಯಗಳು ನಿರಂತರವಾಗಿ ನಡೆಯಬೇಕು ಎಂದು ಅವರು ಸಲಹೆ ಮಾಡಿದರು.

ಜಿಲ್ಲಾಡಳಿತದ ಕಾರ್ಯಕ್ಕೆ ಮೆಚ್ಚುಗೆ: ಹಂಪಿ ಪ್ರದೇಶದಲ್ಲಿ ಪರಿಸರ ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ಹಾಗೂ ಜನಸ್ನೇಹಿ ಸೈಕಲ್ ಟೂರಿಸಂಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸಿದ್ಧಪಡಿಸುತ್ತಿರುವ ಸೈಕಲ್ ಟೂರಿಸಂನ ಪ್ಲಾನ್ ಮತ್ತು ರೂಟ್ ಬಗ್ಗೆ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಸೈಕಲ್ ಮೂಲಕ ಎಲ್ಲರೂ ಹಂಪಿಯನ್ನು ನೋಡುವ ಪ್ರಾಜೆಕ್ಟ್ ನೋಡಿ ಜಿಲ್ಲಾಡಳಿತದ ಕ್ರಮದ ಬಗ್ಗೆ ಜುನಾಯಿ ಹಾನ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಪುರಾತತ್ವ ಇಲಾಖೆಯ ಅಧೀಕ್ಷಕರಾದ ನೀಲದಾಸ್ ರಾಜು, ಪುರಾತತ್ವ ಇಲಾಖೆಯ ಉಪ ನಿರ್ದೇಶಕರಾದ ತೇಜಸ್ವಿ, ಪ್ರವಾಸೋದ್ಯಮ ಇಲಾಖೆಯ ಶಿವಲಿಂಗಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಜಿಲ್ಲಾ ಉಸ್ತುವಾರಿ ಸಚಿವರಿಂದ ಜನವರಿ 24ಕ್ಕೆ ಜನತಾ ದರ್ಶನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ, ವಸತಿ, ವಕ್ಫ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರಾದ ಬಿ.ಜೆಡ್.ಜಹೀರ್ ಅಹ್ಮದ್ ಅವರು ಜನವರಿ 24ರಂದು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಮಹತ್ವದ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಅಂದು ಬೆಳಗ್ಗೆ 10.30ರಿಂದ ಸಚಿವರ ನೇತೃತ್ವದಲ್ಲಿ ಹಾಗೂ ಸಂಬಂಧಿಸಿದ ಚುನಾಯಿತ ಪ್ರತಿನಿಧಿಗಳ ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಕಮಲಾಪುರದ ಹೊಟೆಲ್ ಮಯೂರ ಭುವನೇಶ್ವರಿ ಆವರಣದ ಮೈದಾನದಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಯಲಿದೆ.

ಆಯಾ ಜಿಲ್ಲೆಗಳಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಹಾರ ಕೈಗೊಳ್ಳುವ ನಿಟ್ಟಿನಲ್ಲಿ ನಡೆಯುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತುಸಾರ್ವಜನಿಕರುತಮ್ಮಅಹವಾಲುಗಳೊಂದಿಗೆ ಹಾಜರಾಗಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಜನವರಿ 30ರಿಂದ ಜೇನುಕೃಷಿ ತರಬೇತಿ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ತೋಟಗಾರಿಕೆ ಇಲಾಖೆಯಿಂದ ಜೇನು ಕೃಷಿಗೆ ಸಂಬಂಧಿಸಿದಂತೆ ಮಧುಮನ ಮತ್ತು ಜೇನು ಸಾಕಾಣಿಕೆ ಯೋಜನೆಯಡಿ ರೈತರಿಗೆ ಹಾಗೂ ಆಸಕ್ತರಿಗೆ ಜೇನು ಕೃಷಿ ತರಬೇತಿ ಕಾರ್ಯಕ್ರಮವನ್ನು ಜನವರಿ 30 ಮತ್ತು 31 ರಂದು ಹೊಸಪೇಟೆ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಜೇನು ಕೃಷಿಯನ್ನು ಪ್ರಾಯೋಗಿಕವಾಗಿ ಕಲಿಸಿಕೊಡಲಾಗುವುದು. ಆಸಕ್ತ ರೈತರು, ಸಾರ್ವಜನಿಕರು ತಮ್ಮ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಹೊಸಪೇಟೆ ತಾಲೂಕಿನ ರಾಹಿಲ್ ಮೊ: 7204888978, ಹಗರಿಬೊಮ್ಮನಹಳ್ಳಿ ತಾಲೂಕಿನ ನಾಗರಾಜ್ ಮೊ–6362939196., ಹಡಗಲಿ ತಾಲೂಕಿನ ಚಂದ್ರಕುಮಾರ್ ಮೊ–9880895795., ಹರಪನಹಳ್ಳಿ ತಾಲೂಕಿನ ಮಂಜಾನಾಯ್ಕ ಮೊ–9902752350, ಕೂಡ್ಲಿಗಿ ತಾಲೂಕಿನ ಸೆಮಿವುಲ್ಲಾ ಮೊ–9535170696 ಅವರಿಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದೆ.











# ಜ.26ಕ್ಕೆ ಸಂವಿಧಾನ ಜಾಗೃತಿ ಜಾಥಾ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಿದ್ಧತೆಗೆ ಸೂಚನೆ | ಗ್ರಾಮದ ಮನೆ ಮನೆಗೂ ಸಂವಿಧಾನ ಪೀಠಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಭಾರತ ಸಂವಿಧಾನ ಅಂಗೀಕೃತಗೊಂಡ ಅಮೃತ ಮಹೋತ್ಸವ ಸವಿನೆನಪಿಗಾಗಿ ಸರ್ಕಾರದ ನಿರ್ದೇಶನದಂತೆ ಜನವರಿ 26ರಿಂದ ವಿಜಯನಗರ ಜಿಲ್ಲಾದ್ಯಂತ ಹಮ್ಮಿಕೊಂಡ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಅವರು ಮಾತನಾಡಿ, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಚರಿಸುವ ವಾಹನದ ಮೂಲಕ ಸಾರ್ವಜನಿಕರಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಬೇಕು. ಸಾಮಾಜಿಕ ನ್ಯಾಯ, ಸೌಹಾರ್ದತೆ, ಭಾತೃತ್ವ ಹಾಗೂ ಸಾಮಾಜಿಕ ಸಂದೇಶಗಳನ್ನು ಎಲ್ಲಾ ವರ್ಗದ ಮನೆ–ಮನಗಳಿಗೆ ಕೊಂಡೊಯ್ಯುವ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಇಂಬು ಕೊಡಬೇಕು ಎಂಬುದು ಸರ್ಕಾರದ ನಿರ್ದೇಶನವಾಗಿದೆ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾದ್ಯಂತ ಸಂಚರಿಸುವ ಸಂವಿಧಾನ ಜಾಗೃತಿಯ ವಾಹನಕ್ಕೆ ಆಯಾ ಕಡೆಗೆ ಸಂಭ್ರಮದಿಂದ ಬರ ಮಾಡಿಕೊಳ್ಳಬೇಕು. ಶಿಷ್ಠಾಚಾರ ಪಾಲನೆ ಮಾಡಬೇಕು. ಪ್ರತಿಯೊಂದು ಗ್ರಾಮ, ಹೋಬಳಿ ಸೇರಿದಂತೆ ಎಲ್ಲಾ ಕಡೆಗೆ ಹಬ್ಬದ ಸಂಭ್ರಮ ಕಾಣುವ ಹಾಗೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಆಯಾ ಗ್ರಾಮ ಪಂಚಾಯಿತಿ ಕೇಂದ್ರ, ಹೋಬಳಿ ಕೇಂದ್ರ ಹಾಗೂ ತಾಲೂಕು ಕೇಂದ್ರಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಚಿಂತಕರು, ಸಾಹಿತಿಗಳು, ವಾಗ್ಮಿಗಳು ಹಾಗೂ ಡಾ.ಅಂಬೇಡ್ಕರ ಅವರ ಬಗ್ಗೆ ಆಳವಾದ ಅಧ್ಯಯನ ಮಾಡಿರುವವರಿಗೆ ಆಹ್ವಾನ ನೀಡಿ ಅವರಿಂದ ಸಂವಿಧಾನದ ಬಗ್ಗೆ ಭಾಷಣ ಏರ್ಪಡಿಸಬೇಕು. ಜಾಥಾ ಅಂಗವಾಗಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಚಿತ್ರ ರಚನೆ, ಪ್ರಬಂಧ ಸ್ಪರ್ಧೆ ಮುಂತಾದವುಗಳನ್ನು ಜಾಥಾ ಬರುವ ಹಿಂದಿನ ದಿನವೇ ಆಯೋಜಿಸಿ ಉತ್ತೇಜನೆ ನೀಡಲು ಕ್ರಮ ವಹಿಸಬೇಕು ಎಂದರು.

ಜಾಥಾ ಸಾಗುವ ಗ್ರಾಮಗಳ ಎಲ್ಲಾ ಮನೆಗಳಿಗೂ ಸಂವಿಧಾನ ಪೀಠಿಕೆಯ ಕಾರ್ಡಗಳನ್ನು ನೀಡುವ ಮೂಲಕ ಸಂವಿಧಾನ ಪೀಠಿಕೆ ಎಲ್ಲರನ್ನೂ ತಲುಪುವಂತೆ ನೋಡಿಕೊಳ್ಳಬೇಕು. ಬಾಬಾ ಸಾಹೇಬರ ಅಪರೂಪದ ಚಿತ್ರಗಳು, ವಿಡಿಯೋ ತುಣುಕುಗಳು, ಸಂವಿಧಾನ ರಚನಾ ಸಭೆಯಲ್ಲಿ ನಡೆಸಿರುವ ಚರ್ಚೆಗಳ ವಿಡಿಯೋಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಇನ್ನಿತರರು ಇದ್ದರು.

# ಶ್ರೀ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನದಲ್ಲಿ ಶ್ರೀರಾಮಗೆ ಭಕ್ತರಿಂದಪೂಜಾ ಕೈಂಕಾರ್ಯ



■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಶ್ರೀ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನದಲ್ಲಿ ಶ್ರೀರಾಮ ಭಕ್ತರು ಸೋಮವಾರ ಆಯೋಧ್ಯಯಲ್ಲಿ ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ ಪ್ರಯುಕ್ತ ಪ್ರಭು ಶ್ರೀರಾಮನ ಪೂಜಾ ಕಾರ್ಯಕ್ರಮ ನೆರವೇರಿಸಿ ಶ್ರೀರಾಮನ ಜಯ ಘೋಷಗಳನ್ನು ಕೂಗಿ ಭಕ್ತಾಧಿಗಳಿಗೆ ಸಿಹಿ ವಿತರಿಸಿ ಭಕ್ತಿ ಸಮರ್ಪಿಸಿದರು.

ಪಟ್ಟಣದ ಆಂಜನೇಯ ಸ್ವಾಮಿ ದೇವಸ್ಥಾನಗಳಲ್ಲಿ ಮತ್ತು ಕನ್ನಿಕಾಪರಮೇಶ್ವರಿ ದೇವಸ್ಥಾನ ಹಾಗೂ ಶ್ರೀ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನ ಸೇರಿದಂತೆ ಪಟ್ಟಣದ ಎಲ್ಲಾ ದೇವಸ್ಥಾನಗಳಲ್ಲಿ ಭಾನುವಾರ ಸಂಜೆಯಿಂದಲೇ ಪೂಜಾ ಕೈಂಕಾರ್ಯಗಳ ಸಿದ್ದತೆ ಮತ್ತು ಶ್ರೀರಾಮನ ಭಕ್ತರ ಸಂಭ್ರಮ ಎಲ್ಲಾ ದೇವಸ್ಥಾನಗಳಲ್ಲಿ ಘೋಚರಿಸಿತು. ಆಯೋಧ್ಯಯಲ್ಲಿ ಶ್ರೀರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆ ಪಟ್ಟಣದ ಎಲ್ಲಾ ದೇವಸ್ಥಾನಗಳಲ್ಲಿ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀರಾಮನ ನಾಮಾಂಕಿತದಲ್ಲಿ ಪಂಚಾಮೃತ ಅಭಿಷೇಕ ,ರುದ್ರಾಭಿಷೇಕ ಮತ್ತು ಪುಷ್ಪಾಲಂಕಾರ ಹಾಗೂ ಮಹಾಮಂಗಳಾರತಿ ಪೂಜಾ ಕಾರ್ಯಕ್ರಮಗಳು ಜರುಗಿದವು. ಶ್ರೀ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನದಲ್ಲಿ ಶ್ರೀರಾಮನಿಗೆ ಪೂಜಾ ಕೈಂಕಾರ್ಯವನ್ನು ಶ್ರೀರಾಮ ಭಕ್ತರು ಎಂ.ಅಜ್ಜಣ್ಣ,ವಸಂತಕುಮಾರ,ಪ್ರವೀಣ್, ಕಡ್ಲಿ ವಿನಾಯಕ, ಚಂದ್ರಶೇಖರ, ಪ್ರಶಾಂತ, ವೇದಮೂರ್ತಿ,ಶ್ರೀಕಾಂತ್, ಸಂತೋಷ, ಅಜೀತ್ ಸೇರಿದಂತೆ ಅನೇಕರು ಸೇರಿ ಪೂಜೆ ಸಲ್ಲಿಸಿ ಪ್ರಸಾದ್ ವಿತರಣೆಯಲ್ಲಿ ಪಾಲ್ಗೊಂಡಿದ್ದರು.






# ರಾಮಲಲ್ಲಾ ಪ್ರತಿಷ್ಠಾಪನೆಗೆ ಭಕ್ತರಲ್ಲಿ ಸಂಭ್ರಮ

## ದೇಗುಲಗಳಲ್ಲಿ ಪೂಜೆ ಜ್ಞಾನಭಾರತಿ ಶಾಲಾ ವಿದ್ಯಾರ್ಥಿಗಳು ಜೈ ಶ್ರೀರಾಮ್ ಆಕರ್ಷಕ ಕವಾಯತು

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಅಯೋಧ್ಯೆಯ ಪ್ರಭು ಶ್ರೀರಾಮನ ಪ್ರತಿಷ್ಠಾಪನೆ ಅಂಗವಾಗಿ ಸೋಮವಾರ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ರಾಮ ಭಕ್ತಿಯಲ್ಲಿ ಮಿಂದೆದ್ದಿತು.

ಭಾನುವಾರ ತಾಲೂಕಿನ ಪ್ರತಿ ಗ್ರಾಮದ ಗುಡಿಗಳು ಸ್ವಚ್ಛಗೊಳಿಸುವ ಮೂಲಕ ಪ್ರಧಾನಿ ಮೋದಿ ಆಶಯವನ್ನು ರಾಮ ಭಕ್ತರು ಈಡೇರಿಸಿದರು. ಇನ್ನೂ ಸೋಮವಾರ ಬೆಳಿಗ್ಗೆಯಿಂದಲೇ ಪಟ್ಟಣದ ಮನೆಗಳ ಮುಂದೆ ಶ್ರೀರಾಮನ ಬಣ್ಣ, ಬಣ್ಣದ ರಂಗೋಲಿ ಕಂಗೊಳಿಸುತ್ತಿದ್ದವು. ಬ್ರಾಹ್ಮಿ ಮುಹೂರ್ತದಲ್ಲಿ ಪೇಟೆ ಬಸವೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ ನಡೆಯಿತು. ನಂತರ 12 ಗಂಟೆಗೆ ಹಿ.ಮ.ಚಿದಾನಂದ ಸ್ವಾಮಿಗಳ ನೇತೃತ್ವದಲ್ಲಿ ಪ್ರಭು ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ,ರಾಮನಿಗೆ ಜಯಕಾರ ಹಾಕಿದರು.ನಂತರ ಕೋಸಂಬರಿ, ಕೇಸರಿಬಾತ್ ಪ್ರಸಾದವನ್ನು ವಿನಿಯೋಗ ಮಾಡಿದರು. ಅದರಂತೆ ಪಟ್ಟಣದ ಇತಿಹಾಸ ಪ್ರಸಿದ್ಧ ರಾಮಲಿಂಗೇಶ್ವರ ದೇವಸ್ಥಾನದಲ್ಲಿಯೂ ವಿಶೇಷ ಪೂಜೆ ಮಾಡಿ ಅಲಂಕಾರ ಮಾಡಲಾಗಿತ್ತು,ಇದೇ ಪ್ರಾಂಗಣದಲ್ಲಿ ಇರುವ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಪೂಜೆ ಸಲ್ಲಿಸಿ,ರಾಮಲಿಂಗೇಶ್ವರ ಭಜನಾ ಸಮಿತ ಸದಸ್ಯರು ರಾಮನ ಕುರಿತು ಭಜನೆಗಳನ್ನು ಹಾಡಿ, ಬಂದ ಭಕ್ತ ರಗೆ ಪ್ರಸಾದ ಹಂಚಿದರು. ವಿಶ್ವಹಿಂದು ಪರಿಷತ್, ಆರ್ಯವೈಶ್ಯ ಸಮಾಜ





ಹಾಗೂ ಚಿದಂಬರ ದೇವಸ್ಥಾನ ಸಮಿತಿಯಿಂದ ಚಿದಂಬರ ಹಾಗೂ ಸಿದ್ದಿವಿನಾಯಕನಿಗೆ ಪೂಜೆ ಸಲ್ಲಿಸಿ, ಶ್ರೀರಾಮನ ಭಾವಚಿತ್ರಕ್ಕೆ ವಿದ್ಯುಕ್ತವಾಗಿ ಪೂಜೆ ಮಾಡಿದರು. ನಂತರ 1992 ರಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಕರಸೇವೆ ಹೋದ ಪಟ್ಟಣದ ಕರಸೇವಕರಿಗೆ ಶಾಲು ಹಾಕಿ ಸನ್ಮಾನ ಮಾಡಿದರು. ನಂತರ ಮಹಿಳೆಯರು ಶ್ರೀರಾಮನ ಕುರಿತು ಕೀರ್ತನೆಗಳನ್ನು ಹಾಡಿದರು. ನೆರೆದಿದ್ದ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಕೈಗೊಂಡರು. ಅದರಂತೆ ಪಟ್ಟಣದ ಸಚಿನ್ ಫೋಟೋ ಸ್ಟುಡಿಯೋ ಮಾಲೀಕ ನಿರಂಜನ ಪ್ರಭು ಶ್ರೀರಾಮನ ಪ್ರತಿಷ್ಠಾಪನೆ ಅಂಗವಾಗಿ ಸಾರ್ವಜನಿಕರಿಗೆ ಪ್ರಸಾದ ವಿತರಣೆ ಮಾಡಿದರು.

ಪಟ್ಟಣ ಹಾಗೂ ತಾಲೂಕಿನ ಪ್ರತಿ ಗ್ರಾಮದಲ್ಲಿಯೂ ಸಹ ಯುವಕರು, ಮಹಿಳೆಯರು, ಮಕ್ಕಳು ರಾಮನ ಭಾವಚಿತ್ರವನ್ನು ಮೆರವಣಿಗೆ ಮಾಡಿ, ಮನೆ, ಮನೆಗಳಲ್ಲೂ ಹೋಳಿಗೆ, ಪಾಯಸ, ಸಿಹಿ ತಿನಸುಗಳನ್ನ ತಯಾರಿಸಿ ಹಬ್ಬದಂತೆ ಆಚರಣೆ ಮಾಡಿರುವುದು ಕಂಡುಬಂತು. ಅಲ್ಲದೆ ಸಂಜೆ 6ಕ್ಕೆ ಪ್ರತಿ ಗ್ರಾಮಗಳ ದೇವಸ್ಥಾನ ಹಾಗೂ ಮನೆಗಳಲ್ಲಿ ಐದು ದೀಪಗಳನ್ನ ಹಚ್ಚುವಂತೆ ಡಂಗುರ ಸಾರಿ ಹೇಳುತ್ತಿರುವುದು ಕಂಡುಬಂತು. ಒಟ್ಟಾರೆ ಈ ಬಾರಿ ಶ್ರೀರಾಮನ ಪ್ರತಿಷ್ಠಾಪನೆ ಪ್ರಯುಕ್ತ ಮತ್ತೊಂದು ದೀಪಾವಳಿ ನೆನಪಿಸಿದಂತೆ ಭಾಸವಾಯಿತು. ಪಟ್ಟಣದ ಜ್ಞಾನಭಾರತಿ ಶಾಲಾ ವಿಧ್ಯಾರ್ಥಿಗಳು ಪ್ರಭು ಶ್ರೀರಾಮನ ಪ್ರತಿಷ್ಠಾಪನೆ ಅಂಗವಾಗಿ 300ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಮೈದಾನದಲ್ಲಿ ಜೈ ಶ್ರೀರಾಮ ಎಂದು ಬಿಂಬಿಸಿದ ಕವಾಯತು ಬೆರಗು ಗೊಳಿಸಿತು.

ಪಟ್ಟಣದ ಪೇಟೆ ಬಸವೇಶ್ವರ ದೇವಾಲಯದಲ್ಲಿ ಹಿ.ಮ.ಚಿದಾನಂದ ಸ್ವಾಮಿ ನೇತೃತ್ವದಲ್ಲಿ ಪ್ರಭು ಶ್ರೀರಾಮನ ಪೂಜೆ ಮಾಡಿದರು.

ಪಟ್ಟಣದ ಜ್ಞಾನಭಾರತಿ ಶಾಲಾ ವಿಧ್ಯಾರ್ಥಿಗಳು ಜೈ ಶ್ರೀರಾಮ್ ಎಂದು ಮೈದಾನದಲ್ಲಿ ಕವಾಯತು ಗಮನ ಸೆಳೆಯಿತು.

ಪಟ್ಟಣದ ಚಿದಂಬರೇಶ್ವರ ದೇವಸ್ಥಾನದಲ್ಲಿ ಆರ್ಯವೈಶ್ಯ ಸಮಾಜದ ವತಿಯಿಂದ 1992 ರಲ್ಲಿ ಅಯೋಧ್ಯೆಗೆ ಕರಸೇವೆಗೆ ತೆರಳಿದ್ದ ಕರಸೇವಕರಾದ ಅನಂತ ಪದ್ಮನಾಭ, ಆನಂದ ಬಾಬು, ಡಾ.ಟಿ.ಎಂ. ಶಾಂತಯ್ಯ, ಕೆ.ಎಂ. ಶಾಂತವೀರಯ್ಯ, ಗ್ಯಾಸ್ ಶ್ರೀನಿವಾಸ,ಬಂಡ್ರಿ ವಿಜಯಕುಮಾರ ಇತರರನ್ನು ಸನ್ಮಾನ ಮಾಡಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA